ಭಾರತದ ಬಹುತೇಕ ಮಾತೃಭಾಷೆಗಳ ಪರಿಸ್ಥಿತಿ ಇಂತದೇ ಇಕ್ಕಟ್ಟಿನಲ್ಲಿದೆ. ಇಂಗ್ಲಿಷ್ ಮಾಧ್ಯಮದ ಶಿಕ್ಷಣಕ್ಕಾಗಿನ ಈ ಅರ್ಥಹೀನ 'ಇಲಿಗಳ ಓಟದ ಸ್ಪರ್ಧೆ'ಯು ಉನ್ಮಾದದ ಸ್ಥಿತಿಯನ್ನು ತಲುಪಿ ನಿಂತಿದೆ. ಆ ವಿಚಾರಸಂಕಿರಣದ ಎಲ್ಲ ಪ್ರಬಂಧಗಳನ್ನು ಸೇರಿಸಿ 'ಶಾಲಾ ಶಿಕ್ಷಣದಲ್ಲಿ ದೇಶ ಭಾಷೆಗಳು' ಎಂಬ ಕೃತಿಯನ್ನೂ ಪ್ರಾಧಿಕಾರ ಹೊರತಂದಿದೆ.

ನನ್ನ ಬಲವಾದ ನಂಬಿಕೆ ಏನೆಂದರೆ ಇಂಗ್ಲಿಷ್‌ನ ಮೇಲೆ ಪ್ರಭುತ್ವ ಸಾಧಿಸಲು ಇಂಗ್ಲಿಷ್ ಮೀಡಿಯಂ ಶಾಲೆಗಳು ಅವಶ್ಯವೇನಲ್ಲ. ಇಂಗ್ಲಿಷ್ ಅಥವಾ ಯಾವುದೇ ಭಾಷೆಯನ್ನು ಕಲಿಯಲು ಬೇಕಿರುವುದು ತೀವ್ರವಾದ ಕಲಿಕಾಸಕ್ತಿ ಅಷ್ಟೇ. ಇಂಗ್ಲಿಷ್ ಕಲಿಯುವುದು ಮತ್ತು ಇಂಗ್ಲಿಷ್‌ನಲ್ಲಿ ಕಲಿಯುವುದು ಇವೆರಡರ ನಡುವೆ ಸಾಕಷ್ಟು ವ್ಯತ್ಯಾಸವಿದೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳುತ್ತಿಲ್ಲ. ಪ್ರತಿಯೊಂದು ಭಾಷೆಯನ್ನಾಡುವ ಸಮುದಾಯದಲ್ಲೂ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷಾ ಮಾಧ್ಯಮದಲ್ಲಿ ಪಡೆದು ಮುಂದೆ ಅತ್ಯುನ್ನತ ಗೌರವಗಳಿಗೆ ಪಾತ್ರರಾದಂಥ ಸಾವಿರಾರು ಡಾಕ್ಟರರು, ಎಂಜಿನಿಯರರು, ವಿಜ್ಞಾನಿಗಳು, ಉದ್ಯಮಿಗಳು, ಇತರೆ ಹಲವಾರು ಕ್ಷೇತ್ರಗಳಲ್ಲಿನ ಉದ್ಯೋಗಿಗಳು ಇದ್ದಾರೆ. ಯುನೆಸ್ಕೊ ಅಂತೂ ಸ್ಪಷ್ಟವಾಗಿ ಹೇಳಿದೆ – 'ಆರಂಭಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಪಡೆದರೆ ಅಲ್ಲಿನ ಕಲಿಕಾನುಭವದ ಆಧಾರದ ಮೇಲೆ ನಂತರ ಮಕ್ಕಳು ಸುಲಭವಾಗಿ ಯಾವುದೇ ಭಾಷೆಯನ್ನು ಕಲಿಯುತ್ತಾರೆ'. ಅದೇ ಯುನೆಸ್ಕೋವೇ 'ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಸಿಂಗಪುರ, ಹಾಂಕಾಂಗ್, ಕೊರಿಯಾ, ಚೀನಾ, ತೈಪೈ ಮತ್ತು ಜಪಾನ್ ದೇಶಗಳು ಟಾಪರ್‌ಗಳಾಗಿವೆ' ಎಂದು ಘೋಷಿಸಿದೆ. ಈ ದೇಶಗಳೆಲ್ಲ ಇಂಗ್ಲಿಷ್‌ಗಿಂತ ತಮ್ಮ ಮಾತೃಭಾಷೆಗಳಿಗೇ ಹೆಚ್ಚಿನ ಮನ್ನಣೆ ನೀಡುವಂಥ ದೇಶಗಳೆಂದು ನಮಗೆಲ್ಲ ತಿಳಿದೇ ಇದೆ.

ನಾವು ಒಂದು ಮೂಲ ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕು. ಅಂಕಿ–ಸಂಖ್ಯೆಗಳ ಪ್ರಕಾರ ಕೇವಲ ಶೇಕಡಾ ಐದರಷ್ಟು ವಿದ್ಯಾರ್ಥಿಗಳು ವಿಜ್ಞಾನ ವಿಭಾಗಕ್ಕೆ ಹೋದರೆ ಉಳಿದ ಶೇಕಡಾ ತೊಂಬತ್ತೈದರಷ್ಟು ವಿದ್ಯಾರ್ಥಿಗಳು ಉದ್ಯೋಗ, ಉದ್ದಿಮೆ ಮುಂತಾದ ವಿಭಿನ್ನ ಕ್ಷೇತ್ರಗಳಲ್ಲಿ ನೆಲೆ ಕಂಡುಕೊಳ್ಳುತ್ತಾರಲ್ಲದೆ ಅಲ್ಲಲ್ಲಿಯ ಪ್ರಾದೇಶಿಕ ಭಾಷೆಗಳನ್ನು ಕಲಿತು ಹೊಂದಿಕೊಂಡುಬಿಡುತ್ತಾರೆ. ಇದೇ ಸಂದರ್ಭಕ್ಕೆ ಸಿಂಧಿಯಂಥ ಕಡಿಮೆ ಜನ ಮಾತಾಡುವ ಭಾಷೆಗಳ ವಿಚಾರದಲ್ಲಿ ಇಂಥ ಹೊಂದಾಣಿಕೆಯು ತುಸು ತಡವಾಗಿ ಆಗುತ್ತದೆಂಬ ವಾಸ್ತವವನ್ನೂ ನಾವು ಅರ್ಥ ಮಾಡಿಕೊಳ್ಳಬೇಕು. ಇಂಥ ಭಾಷೆಗಳ ಪಾಲಕರಿಗೆ ಆದಷ್ಟು ಬೇಗ ಅವರ ಕಣ್ಣು ತೆರೆಸುವಂಥ ಬುದ್ಧಿ ಬರುವಂತಾಗಲಿ ಎಂದು ನಾವು ಪ್ರಾರ್ಥಿಸಬಹುದಷ್ಟೇ.

◆ **ಸಿಂಧಿ ಭಾಷೆಯನ್ನು ಪರ್ಶಿಯೋ–ಅರೇಬಿಕ್ ಮತ್ತು ದೇವನಾಗರಿ ಎರಡೂ ಲಿಪಿಗಳಲ್ಲಿ ಬರೆಯಲಾಗುತ್ತದೆ. ಈ ಲಿಪಿಕಾರಣದ ದ್ವಂದ್ವದ ಹುಟ್ಟಿನ ಮೂಲ, ಇದರ ಇತಿಹಾಸ, ತಾತ್ವಿಕತೆ ಮತ್ತು ಸ್ಥಿತಿಗತಿಗಳ ಬಗ್ಗೆ ನೀವೇನು ಹೇಳಬಯಸುತ್ತೀರಿ? ಇದರಿಂದ ಸಿಂಧಿ ಭಾಷೆ ಮತ್ತು ಸಮುದಾಯಗಳ ಮೇಲೆ ಆಗಿರುವ ಪರಿಣಾಮದ ಸ್ವರೂಪವೇನು?**

ಎರಡು ಲಿಪಿಗಳನ್ನು ಹೊಂದಿರುವುದು ಸಿಂಧಿ ಭಾಷೆಯ ಮತ್ತೊಂದು ದುರಂತ. ಬ್ರಿಟಿಷರು ಸಿಂಧ್ ಪ್ರಾಂತ್ಯವನ್ನು 1843ರಲ್ಲಿ ವಶಪಡಿಸಿಕೊಂಡರು. ಆ ಸಮಯದಲ್ಲಿ ಸಿಂಧಿಯನ್ನು ಬರೆಯಲು ಬ್ರಾಹ್ಮಣರು ದೇವನಾಗರಿ ಲಿಪಿಯನ್ನು, ಮಿಕ್ಕ ಹಿಂದೂಗಳು ತಮ್ಮ ವ್ಯಾಪಾರಗಳಲ್ಲಿ ಬಳಸುತ್ತಿದ್ದ ಸ್ಥಳೀಯವಾದ ಹತ್‌ವಾಣಿಕೆ ಎಂಬ ಲಿಪಿಯನ್ನು ಮತ್ತು ಮುಸ್ಲಿಮರು ಪರ್ಶಿಯನ್ ಹಾಗೂ ಅರೇಬಿಕ್ ಲಿಪಿಗಳನ್ನು ಬಳಸುತ್ತಿದ್ದರು. ಬ್ರಿಟಿಷರಿಗೆ ಆಡಳಿತಾತ್ಮಕ ಅನುಕೂಲದ ಕಾರಣಕ್ಕಾಗಿ ಯಾವುದಾದರೂ ಒಂದು ಲಿಪಿಯನ್ನು ಬಳಕೆಗೆ ತರಬೇಕೆಂಬ ಅಪೇಕ್ಷೆಯಿತ್ತು. ಇದಕ್ಕಾಗಿ 1853ರಲ್ಲಿ